ಅಸಲು ದಾವೆ ನಂ.48/2019 PW: 1

ದಿನಾಂಕಃ 30.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ 10 ಪರ ಶ್ರೀ. ಎಂ.ಎನ್.ಪಿ ವಕೀಲರಿಂದಃ**

ಪ್ರತಿವಾದಿ 10 ನನ್ನ ಚಿಕ್ಕಪ್ಪ. ನನ್ನ ತಾತ ಮಲ್ಲಾರೆಡ್ಡಿ ಗೆ 5 ಜನ ಗಂಡು ಮಕ್ಕಳು ಮತ್ತು 4 ಜನ ಹೆಣ್ಣು ಮಕ್ಕಳು. ನನ್ನ ತಂದೆಯನ್ನು ಹೊರತುಪಡಿಸಿ ಮಲ್ಲಾರೆಡ್ಡಿ ರವರ ಎಲ್ಲಾ ಮಕ್ಕಳು ಜೀವಂತವಿದ್ದಾರೆ. ಮಲ್ಲಾರೆಡ್ಡಿ ರವರ ಎಲ್ಲಾ ಮಕ್ಕಳನ್ನು ಈ ದಾವೆಯಲ್ಲಿ ಸೇರಿಸಿಲ್ಲ. ಪ್ರತಿವಾದಿ 10 ರವರು ಈ ದಾವೆಯಲ್ಲಿ ಅವರೇ ಸೇರ್ಪಡೆಗೊಂಡಿದ್ದಾರೆ ಎಂದರೆ ಸರಿ. ದಿನಾಂಕ 17.01.1991 ರ ಮೂಜುಬಾನೆ ಪತ್ರವನ್ನು ರದ್ಧುಗೊಳಿಸುವಂತೆ ಕೋರಿ ಪ್ರತಿವಾದಿ 10 ರವರು ಓಎಸ್ 128/2014 ರಂತೆ ದಾವೆ ದಾಖಲಿಸಿದ್ದು ಸದರಿ ದಾವೆ ವಿಚಾರಣೆಗೆ ಬಾಕಿ ಇದೆ ಎಂದರೆ ಸರಿ. ಸದರಿ ದಾವೆಯಲ್ಲಿ ನನ್ನ ತಂದೆ ತೀರಿಕೊಂಡ ನಂತರ ನನ್ನನ್ನು ಮತ್ತು ನನ್ನ ತಾಯಿಯನ್ನು ಸೇರಿಸಲಾಗಿದೆ ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯ ಸ್ವತ್ತುಗಳು ಸದರಿ ದಾವೆಯಲ್ಲಿ ಸೇರಿವೆ ಎಂದರೆ ಆ ದಾವೆಯ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ತಂದೆಗೆ ಇನ್ನೂ ಭಾಗ ಬಂದಿಲ್ಲದ ಕಾರಣ ನಾನು ಸಲ್ಲಿಸಿರುವ ಈ ದಾವೆ ಊರ್ಜಿತವಲ್ಲ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಪ್ರತಿವಾದಿ 10 ರವರು ಸಲ್ಲಿಸಿರುವ ಪ್ರತಿವಾದ ಪತ್ರದ ಅಂಶಗಳ ಬಗ್ಗೆ ನನಗೆ ಗೊತ್ತಿಲ್ಲ.

**ಮರು ವಿಚಾರಣೆ: ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

(ಕೆ. ಎ. ನಾಗೇಶ)

**1 ನೇ ಅಪರ ಹಿರಿಯ ಸಿ.ಜೆ. ಮತ್ತು ಜೆಎಂಎಫ್‌ಸಿ**

**ಕೆಜಿಎಫ್**